5.	ಕು. ಲತಾ	ಈ ಮೂರು ಜನ ಮೃತರ ವಾರಸುದಾರರಿಗೆ ರೂ. 10,000-00
6.	ಶ್ರೀಮತಿ ಗಂಗೂಬಾಯಿ	ಗಳನ್ನು ನೀಡಿದ್ದು ಉಳಿದ ರೂ. 15,000-00 ಪರಿಹಾರ ಮೊತ್ತವನ್ನು ನೀಡಲು ಆದಷ್ಟು ಬೇಗ ಕ್ರಮ
7.	ಕು. ರವಿನಾಯ್ಕ	ಕೈಗೊಳ್ಳಲಾಗುವುದು.
8.	ಶ್ರೀ ಲಾಲ್ಯಾ ನಾಯ್ಕ	ಅನಾರೋಗ್ಯದ ಕಾರಣದಿಂದ ಈ ವ್ಯಕ್ತಿ ಮೃತಪಟ್ಟಿರುವುದಾಗಿ ಶವಪರೀಕ್ಷೆಯ ವರದಿಯಿಂದ ತಿಳಿದು ಬಂದಿರುವುದಾಗಿ ಸೂಪರಿಂಟೆಂಡ್ ಆಫ್ ಪೋಲೀಸ್ ಚಿಕ್ಕಮಗಳೂರು ಇವರಿಂದ ತಿಳಿದು ಬಂದಿರುತ್ತದೆ.

ಊ) ಚಿರತೆಯ ಹಾವಳಿಯಿಂದ ಗಾಯಗೊಂಡಿರುವವರ ವಿವರ:-

1.	ಶ್ರೀ ಕೃಷ್ಣ ನಾಯಕ	ತಲಾ 1,000 ರೂಪಾಯಿಗಳನ್ನು ಪರಿಹಾರ ಧನವಾಗಿ
2.	ಶ್ರೀ ಚಂದ್ರಬೋವಿ	ನೀಡಲಾಗಿದೆ.

ವಿಷಯ:- 1996-97ರಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಶಿಕ್ಷಕರ ವರ್ಗ.

1320 (2244) ಶ್ರೀ. ಎಂ.ಪಿ. ಕರ್ಕಿ (ಕುಮಟಾ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರ ಈ ಬಾರಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಎಷ್ಟು ವರ್ಗಾವಣೆ ಮಾಡಿರುತ್ತದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) 1996-97ನೇ ಶೈಕ್ಷಣಿಕ ವರ್ಷದಲ್ಲಿ ಯಾವುದೇ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಶಿಕ್ಷಕರನ್ನು ವರ್ಗ ಮಾಡಿರುವುದಿಲ್ಲ. ಒಬ್ಬ ಬೋಧಕೇತರ ನೌಕರರನ್ನು ಮತ್ತು ನಾಲ್ಕು ಮಂದಿ ಉಪ-ನಿರ್ದೇಶಕರನ್ನು ಮಾತ್ರ ವರ್ಗಾಯಿಸಲಾಗಿದೆ. ಆದರೆ ದಿನಾಂಕ 23-5-96ರಲ್ಲಿ ಸಹ ನಿರ್ದೇಶಕರು ಬೆಳಗಾಂ ವಿಭಾಗದಲ್ಲಿ 15 ಪ್ರೌಢಶಾಲಾ ಶಿಕ್ಷಕರಿಗೆ ಖಾಲಿ ಹುದ್ದೆಗಳಿಗೆ ಸ್ಥಳ ನಿಯುಕ್ತಿ ಆದೇಶ ನೀಡಿರುತ್ತಾರೆ.

ವಿಷಯ:- 1994-95 ಹಾಗೂ 95-96ರಲ್ಲಿ ಶಾಲಾ ಬಡ ಮಕ್ಕಳಿಗೆ ಬಟ್ಟೆ ಒದಗಿಸಿರುವುದು.

1326 (2325) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1994-95, 1995-96ರಲ್ಲಿ ರಾಜ್ಯದಲ್ಲಿ ಶಾಲಾ ಬಡಮಕ್ಕಳಿಗೆ ಎಷ್ಟು ಬಟ್ಟೆಗಳನ್ನು ಕೊಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

ಆ) ಬಟ್ಟೆಗಳು ಸಕಾಲದಲ್ಲಿ ಹಂಚಿಕೆಯಾಗದಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) 1994-94 ರಲ್ಲಿ 26,57,694 ಸೆಟ್ಟುಗಳು

ಆ) 1995-96 ರಲ್ಲಿ 36,61,756 ಸೆಟ್ಟುಗಳು

ಇ) ಬಂದಿದೆ.

ಈ) ಸರ್ಕಾರವು ನಿರ್ಣಯ ತೆಗೆದುಕೊಂಡಂತೆ ಸರ್ಕಾರಿ ಆದೇಶ ಸಂಖ್ಯೆ: ಇಡಿ 44 ಯೋಯೋಕಾ 95 ದಿನಾಂಕ: 25.5.96ರ ಅನ್ವಯ ಸಮವಸ್ತ್ರಗಳನ್ನು ಒದಗಿಸಲು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, ಇವರಿಗೆ ವಹಿಸಲಾಗಿದೆ. ಮತ್ತು ದಿನಾಂಕ: 30.9.96 ರೊಳಗೆ ಎಲ್ಲಾ ಜಿಲ್ಲೆಗಳಿಗೆ ಒದಗಿಸುವಂತೆ ನಿರ್ದೇಶನ ನೀಡಲಾಗಿದೆ. ಸಕಾಲದಲ್ಲಿ ಸಮವಸ್ತ್ರ ಹಂಚಿಕೆಯಾಗುವಂತೆ ಸರ್ಕಾರವು ಇದರ ಬಗ್ಗೆ ಗಮನ ವಹಿಸುತ್ತದೆ.

1994-95ನೇ ಸಾಲಿನಲ್ಲಿ ಸಮವಸ್ತ್ರಗಳ ಸರಬರಾಜು ಬಗ್ಗೆ ಜಿಲ್ಲಾವಾರು ವಿವರ:

Districtwise details of the uniforms distributed during 1994-95:

ಕ್ರ.ನಂ. Sl.No.	ಜಿಲ್ಲೆಯ ಹೆಸರು Name of the District	ಗಂಡು ಮಕ್ಕಳು Boys	ಹೆಣ್ಣು ಮಕ್ಕಳು Girls	ಒಟ್ಟು Total
1	2	3	4	5
1.	ಬೆಂಗಳೂರು ಉತ್ತರ Bangalore North	25702	35341	61043
2.	ಬೆಂಗಳೂರು ದಕ್ಷಿಣ Bangalore South	10894	22974	33868
3.	ಬೆಂಗಳೂರು ಗ್ರಾಮಾಂತರ Bangalore Rural	61619	59659	121278
4.	ಬೆಳಗಾವಿ Belgaum	219525	187614	407139
5.	ಬಳ್ಳಾರಿ Bellary	43537	28188	71725
6.	ಬೀದರ್ Bidar	49739	34376	85115

1	2	3	4	5
7.	ಬಿಜಾಪುರ Bijapur	62539	54885	117424
8.	ಚಿಕ್ಕಮಗಳೂರು Chickmagalur	37676	39864	77540
9.	ಚಿತ್ರದುರ್ಗ Chitradurga	133112	127070	260182
10.	ದಕ್ಷಿಣ ಕನ್ನಡ Dakshina Kannada	76998	68561	145539
11.	ಧಾರವಾಡ Dharwad	165012	144732	309744
12.	ಗುಲ್ಬರ್ಗಾ Gulbarga	131338	97669	229007
13.	ಹಾಸನ Hassan	29237	31182	60419
14.	ಕೋಲಾರ Kolar	67777	51711	119488
15.	ಮಂಡ್ಯ Mandya	19767	17609	37376
16.	ಕೊಡಗು Kodagu	23345	21384	44729
17.	ಮೈಸೂರು Mysore	43428	36082	79510
18.	ರಾಯಚೂರು Raichur	19912	11201	31113
19.	ಶಿವಮೊಗ್ಗ Shimoga	66710	54231	120941
20.	ತುಮಕೂರು Tumkur	91195	88791	179986
21.	ಉತ್ತರ ಕನ್ನಡ Uttara Kannada	35798	29710	65508
		1414860	1242834	2657694

1995-96ನೇ ಸಾಲಿನಲ್ಲಿ ಜಿಲ್ಲಾವಾರು ಸಮವಸ್ತ್ರಗಳ ಹಂಚಿಕೆಯ ಬಗ್ಗೆ ವಿವರ

Districtwise details of the uniforms distributed during 1995-96.

ಕ್ರ. ಸಂ Sl. No.	ಜಿಲ್ಲೆಯ ಹೆಸರು Name of the District	ಗಂಡು ಮಕ್ಕಳು Boys	ಹೆಣ್ಣು ಮಕ್ಕಳು Girls	ಒಟ್ಟು Total
1	2	3	4	5
1.	ಗುಲ್ಬರ್ಗಾ Gulbarga	181414	139034	320448
2.	ಬೀದರ್ Bidar	78640	64410	143050
3.	ಬಳ್ಳಾರಿ Bellary	83040	93650	176690
4.	ಹಾಸನ Hassan	95544	86887	182431
5.	ಚಿಕ್ಕಮಗಳೂರು Chickmagalur	54233	47336	101569
6.	ಮಂಡ್ಯ Mandya	96882	95831	192713
7.	ಬೆಂಗಳೂರು ಉತ್ತರ Bangalore North	35371	35335	70706
8.	ತುಮಕೂರು Tumkur	122356	101419	223775
9.	ಕೊಡಗು Kodagu	22029	19835	41864
10.	ಬೆಂಗಳೂರು ದಕ್ಷಿಣ Bangalore South	65762	44609	110371
11.	ಬೆಂಗಳೂರು ಗ್ರಾಮಾಂತರ Bangalore Rural	66332	85483	151815
12.	ಬೆಳಗಾವಿ Belgaum	209349	158606	367955

1	2	3	4	5
13.	ರಾಯಚೂರು Raichur	95037	90013	185050
14.	ಶಿವಮೊಗ್ಗ Shimoga	136641	117762	254403
15.	ಉತ್ತರ ಕನ್ನಡ Uttara Kannada	53282	48357	101639
16.	ಬಿಜಾಪುರ Bijapur	159355	125637	284992
17.	ದಕ್ಷಿಣ ಕನ್ನಡ Dakshina Kannada	103010	93621	196631
18.	ಚಿತ್ರದುರ್ಗ Chitradurga	-	-	-
19.	ಧಾರವಾಡ Dharwad	-	-	-
20.	ಮೈಸೂರು Mysore	185292	150476	335768
21.	ಕೋಲಾರ Kolar	122980	96886	219866
	ಒಟ್ಟು	1966569	1695187	3661756

ವಿಷಯ:- ಪ್ರೌಢಶಾಲಾ ಶಿಕ್ಷಕರ ಕೊರತೆ.

1327 (2313) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕೊರತೆ ಇರುವ ಪ್ರೌಢಶಾಲಾ ಶಿಕ್ಷಕರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಈ ಕೊರತೆಯನ್ನು ಎಂದು ತುಂಬಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) 2500